# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 199 |
| ಸದಸ್ಯರ ಹೆಸರು | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 06-12-2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮಂಡ್ಯ ಜಿಲ್ಲೆಯಲ್ಲಿ ಭೂದಾಖಲೆಗಳ ಪ್ರಕಾರ ಇರುವ ಕಂದಾಯ ಮತ್ತು ಜನವಸತಿ ಗ್ರಾಮಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)</td><td>ಭೂದಾಖಲೆಗಳ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಇರುವ ಕಂದಾಯ ಮತ್ತು ಜನವಸತಿ ಗ್ರಾಮಗಳ ವಿವರ.
<table>
<tr><th>ಕ್ರ</th><th>ತಾಲ್ಲೂಕು</th><th>ಒಟ್ಟು ಕಂದಾಯ ಗ್ರಾಮಗಳು</th><th>ಜನವಸತಿ ಇರುವ ಗ್ರಾಮಗಳು</th></tr>
<tr><td>1</td><td>ಮಂಡ್ಯ</td><td>183</td><td>346</td></tr>
<tr><td>2</td><td>ಮದ್ದೂರು</td><td>160</td><td>345</td></tr>
<tr><td>3</td><td>ಮಳವಳ್ಳಿ</td><td>186</td><td>334</td></tr>
<tr><td>4</td><td>ಪಾಂಡವಪುರ</td><td>175</td><td>234</td></tr>
<tr><td>5</td><td>ಶ್ರೀರಂಗಪಟ್ಟಣ</td><td>97</td><td>155</td></tr>
<tr><td>6</td><td>ನಾಗಮಂಗಲ</td><td>367</td><td>638</td></tr>
<tr><td>7</td><td>ಕೆ.ಆರ್.ಪೇಟೆ</td><td>316</td><td>344</td></tr>
<tr><td></td><td>ಒಟ್ಟು</td><td>1484</td><td>2396</td></tr>
</table></td></tr>
<tr><td>(ಆ)</td><td>ಹೊಸದಾಗಿ ಕಂದಾಯ ಗ್ರಾಮಗಳಾಗಿ ಪರಿವರ್ತಿ ಸಲು ಬಾಕಿ ಇರುವ ಗ್ರಾಮಗಳ ಸಂಖ್ಯೆ ಎಷ್ಟು? ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ತಾಲ್ಲೂಕುವಾರು ವಿವರ ನೀಡುವುದು)</td><td>ಮಂಡ್ಯ ಜಿಲ್ಲೆಯಲ್ಲಿ ಹೊಸದಾಗಿ ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಬಾಕಿಯಿರುವ ಗ್ರಾಮಗಳ ವಿವರ
<table>
<tr><th rowspan="2">ಕ್ರ ಸಂ.</th><th rowspan="2">ತಾಲ್ಲೂಕು</th><th rowspan="2">ಕಂದಾಯ ಗ್ರಾಮಗಳಾಗಿ ಪರಿವರ್ತಿಸಬೇಕಾದ ಗ್ರಾಮಗಳ ಸಂಖ್ಯೆ</th><th colspan="2">ಪ್ರಸ್ತಾವನೆ ಸಲ್ಲಿಸಿರುವ ಗ್ರಾಮಗಳ ಸಂಖ್ಯೆ</th><th colspan="2">ಪ್ರಸ್ತಾವನೆ ಸಲ್ಲಿಸಲು ಬಾಕಿ ಯಿರುವ ಗ್ರಾಮಗಳ ಸಂಖ್ಯೆ</th></tr>
<tr><th>ಪ್ರಾಥಮಿಕ ಅಧಿ ಸೂಚನೆ</th><th>ಅಂತಿಮ ಅಧಿ ಸೂಚನೆ</th><th>ಪ್ರಾಥ ಮಿಕ ಅಧಿ ಸೂಚನೆ</th><th>ಅಂತಿ ಮ ಅಧಿ ಸೂಚ ನೆ</th></tr>
<tr><td>1</td><td>ಮಂಡ್ಯ</td><td>18</td><td>15</td><td>15</td><td>3</td><td>0</td></tr>
<tr><td>2</td><td>ಮದ್ದೂರು</td><td>45</td><td>43</td><td>42</td><td>2</td><td>1</td></tr>
<tr><td>3</td><td>ಮಳವಳ್ಳಿ</td><td>25</td><td>25</td><td>25</td><td>0</td><td>0</td></tr>
<tr><td>4</td><td>ಪಾಂಡವಪುರ</td><td>12</td><td>12</td><td>12</td><td>0</td><td>0</td></tr>
<tr><td>5</td><td>ಶ್ರೀರಂಗಪಟ್ಟಣ</td><td>16</td><td>16</td><td>16</td><td>0</td><td>0</td></tr>
<tr><td>6</td><td>ನಾಗಮಂಗಲ</td><td>11</td><td>11</td><td>11</td><td>0</td><td>0</td></tr>
<tr><td>7</td><td>ಕೆ.ಆರ್.ಪೇಟೆ</td><td>22</td><td>22</td><td>20</td><td>0</td><td>2</td></tr>
<tr><td></td><td>ಒಟ್ಟು</td><td>149</td><td>144</td><td>141</td><td>5</td><td>3</td></tr>
</table></td></tr>
</table>

(ಇ) 'ಪೋಡಿ ಮುಕ್ತ ಗ್ರಾಮ' ಯೋಜನೆಯಡಿ ಎಷ್ಟು ಕಂದಾಯ ಗ್ರಾಮಗಳನ್ನು ಗುರುತಿಸಲಾಗಿದೆ, ಈ ಪೈಕಿ ಈವರೆಗೂ ಎಷ್ಟು ಗ್ರಾಮಗಳಲ್ಲಿ ಅಳತೆ ಕಾರ್ಯ ಪೂರ್ಣಗೊಳಿಸಲಾಗಿದೆ (ವಿವರ ನೀಡುವುದು

**ಮಂಡ್ಯ ಜಿಲ್ಲೆಯಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಅಳತೆ ಕಾರ್ಯ ಪೂರ್ಣಗೊಂಡ ಗ್ರಾಮಗಳ ವಿವರ**

| ಕ್ರ | ತಾಲ್ಲೂಕು | ಒಟ್ಟು ಗ್ರಾಮಗಳು | ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಆಯ್ಕೆಗೊಂಡ ಒಟ್ಟು ಗ್ರಾಮಗಳು | ಅಳತೆ ಪೂರ್ಣಗೊಂಡ ಗ್ರಾಮಗಳು | | |
|---|---|---|---|---|---|---|
| | | | | ಅಭಿಯಾನ ದಡಿ (ಭೌತಿಕ ವಾಗಿ) | ಮೋಜಿಣಿ ತಂತ್ರಾಂಶ ದಡಿ | ಒಟ್ಟು |
| 1 | ಮಂಡ್ಯ | 183 | 77 | 65 | 12 | 77 |
| 2 | ಮದ್ದೂರು | 160 | 77 | 45 | 32 | 77 |
| 3 | ಮಳವಳ್ಳಿ | 186 | 114 | 105 | 8 | 113 |
| 4 | ಪಾಂಡವಪುರ | 175 | 175 | 175 | 0 | 175 |
| 5 | ಶ್ರೀರಂಗಪಟ್ಟಣ | 97 | 97 | 97 | 0 | 97 |
| 6 | ನಾಗಮಂಗಲ | 367 | 181 | 165 | 16 | 181 |
| 7 | ಕೆ.ಆರ್.ಪೇಟೆ | 316 | 316 | 316 | 0 | 316 |
| | **ಒಟ್ಟು** | **1484** | **1037** | **968** | **68** | **1036** |

(ಈ) ಈ ಯೋಜನೆಯನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸದಿರುವುದಕ್ಕೆ ಕಾರಣಗಳೇನು?

ರಾಜ್ಯದಲ್ಲಿ ಸರ್ಕಾರದ ನಿಯಮದಂತೆ ಸಾರ್ವಜನಿಕರು ದೈನಂದಿನ ಕೆಲಸ ಗಳಿಗಾಗಿ ಅಳತೆ ಕೋರಿ ಸಲ್ಲಿಸುವ 11ಇ, ಅನ್ಯ ಕ್ರಾಂತ, ತತ್ಕಾಲ್ ಪೋಡಿ, ಹದ್ದುಬಸ್ತು, ಇತ್ಯಾದಿ ಅರ್ಜಿಗಳ ಹಾಗೂ ತಾಲ್ಲೂಕುಗಳಲ್ಲಿ ಬರುವ ಸ್ಥಳೀಯ ತೊಂದರೆ ಗಳ ಬಗ್ಗೆ ಅಳತೆ ಕಾರ್ಯಗಳಿಗೆ ಮೊದಲ ಆದ್ಯತೆ ನೀಡಿ ಕಾರ್ಯಗಳನ್ನು ಪೂರೈಸಲು ಅವಶ್ಯಕ ವಾದ ಭೂಮಾಪಕರನ್ನು ಹೊರತು ಪಡಿಸಿ ಉಳಿದ ಭೂಮಾಪಕರುಗಳನ್ನು ಬಳಸಿ ಕೊಂಡು **ಪೋಡಿ ಮುಕ್ತ ಗ್ರಾಮ ಅಭಿಯಾನ** ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

(ಉ) ಯಾವ ಕಾಲಮಿತಿಯೊಳಗೆ ಈ ಕಂದಾಯ ಗ್ರಾಮ ಗಳನ್ನು ಪೋಡಿ ಮುಕ್ತ ಗ್ರಾಮ' ಎಂದು ಘೋಷಿಸ ಲಾಗುವುದು? (ವಿವರ ನೀಡುವುದು)

ರಾಜ್ಯದಲ್ಲಿ ಈ ಹಿಂದೆ COVID-19 ಸಾಂಕ್ರಾಮಿಕ ರೋಗ ಹರಡಿದ್ದರಿಂದ ಮತ್ತು ಲಾಕ್-ಡೌನ್ ಪ್ರಯುಕ್ತ ಸಾರ್ವಜನಿಕರಿಂದ ವಿವಿಧ ರೀತಿಯ ಅಳತೆ ಕೋರಿ ಸ್ವೀಕೃತವಾದ ಹೆಚ್ಚಿನ ಅರ್ಜಿಗಳು ಬಾಕಿ ಉಳಿದಿದ್ದು, ಸದರಿ ಅರ್ಜಿಗಳ ವಿಲೇವಾರಿಗಾಗಿ ಹೆಚ್ಚಿನ ಭೂಮಾಪಕರನ್ನು ನಿಯೋಜಿಸಿದ್ದರಿಂದ ರಾಜ್ಯದಲ್ಲಿ ತಾತ್ಕಾಲಿಕವಾಗಿ ಪೋಡಿ ಮುಕ್ತ ಗ್ರಾಮ ಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು. ನಂತರದಲ್ಲಿ ಸದರಿ ಬಾಕಿ ಅರ್ಜಿಗಳ ವಿಲೇವಾರಿ ನಿಯಂತ್ರಣಕ್ಕೆ ಬಂದ ನಂತರ ರಾಜ್ಯದಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಯನ್ನು ಪುನರಾರಂಭಿಸಲಾಗಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಪಾಂಡವಪುರ ಮತ್ತು ಕೆ.ಆರ್.ಪೇಟೆ ತಾಲ್ಲೂಕುಗಳಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆ ಕಾರ್ಯ ಪೂರ್ಣಗೊಂಡಿದ್ದು, ಮಂಡ್ಯ, ಮದ್ದೂರು, ನಾಗಮಂಗಲ ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ಕಾರ್ಯ ಪ್ರಗತಿಯಲ್ಲಿದೆ.

ಪ್ರಸ್ತುತ ಅಕ್ಟೋಬರ್ 2022 ರಿಂದ ಪೋಡಿ ಮುಕ್ತ ಅಭಿಯಾನ ಯೋಜನೆಯನ್ನು ಮೋಜಿಣಿ ತಂತ್ರಾಂಶದ ಮುಖಾಂತರ ನಿರ್ವಹಿಸಲಾಗುತ್ತಿದ್ದು, ಸಾರ್ವಜನಿಕರಿಂದ ಅಳತೆ ಕೋರಿ ಸ್ವೀಕೃತಿಯಾದ ಅರ್ಜಿಗಳನ್ನು ಮೊದಲ ಆದ್ಯತೆ ಮೆರೆಗೆ ಭೂಮಾಪಕರಿಗೆ ಹಂಚಿಕೆ ಮಾಡಲಾಗುತ್ತಿದ್ದು, ಹೆಚ್ಚಿನ ಮೋಜಿಣಿ ಅರ್ಜಿಗಳು ಬಾಕಿ ಇಲ್ಲದಿರುವ ತಾಲ್ಲೂಕುಗಳಲ್ಲಿ ಪೋಡಿ ಮುಕ್ತ ಗ್ರಾಮ ಅಭಿಯಾನ ಯೋಜನೆಯಡಿ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಅಳತೆ ಕಾರ್ಯ ಪೂರೈಸಲಾಗುತ್ತಿದೆ.

**ಸಂಖ್ಯೆ: ಕಂಇ 183 ಎಸ್‌ಎಸ್‌ಸಿ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು